ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ಇದರಿಂದ ಯಲ್ಲರಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರು ಡಿಸ್ಟ್ರಿಕ್ಟ್ ಕಾರ್ಖಾನಹಳ್ಳಿ, ಚನ್ನಪಟ್ಟಣ, ಕ್ಲೋಸ್‌ಪೇಟೆ, ಮಾಗಡಿ, ದೊಡ್ಡಬಳ್ಳಾಪುರ ಈ ತಾಲ್ಲೂಕುಗಳ ಸ್ಟೇಟ್ ಫಾರೆಸ್ಟ್ ವೈಶಾಖಿ ಪಸಾರೆ ಬಾಬುಗಳನ್ನು 1895—96ನೇ ಸಾಲಿಗೋಸ್ಕರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು ಆಯಾ ತಾಲ್ಲೂಕು ಅಮಿಲರನ್ನ ಇಟ್ಟುಕೊಂಡು ಈ ಕೆಳಗೆ ಕಂಡ ತಖ್ತೇಲಿ ನಮೂದಿಸುವ ತಾರೀಖಿನಲ್ಲಿ ಆಯಾಯ ಸ್ಥಳದಲ್ಲಿ ಹರಾಜು ಮಾಡಿಸುತ್ತಾರೆ.

2. ಚಡಸವಾಲ್‌ದಾರನು ಹರಾಜು ಕೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ $\frac{1}{4}$ ಡಿಪಾಜಿಟ್ ಹಾಜರ್ಮಾಡಬೇಕು ಬಾಕಿ $\frac{3}{4}$ ಹಿಸ್ಸೆ ಮೊಬಲಗನ್ನು ಹರಾಜು ಮಂಜೂರ್ಮಾಡಿ ಅಮಲ್‌ದಾರರಿಂದ ಬರಹ ಮೂಲಕ ವರ್ತಮಾನ ಕೊಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಹಾಜರ್ಮಾಡಬೇಕು ತಪ್ಪಿದರೆ ಬಾಬನ್ನು ಪುನಹ ಹರಾಜು ಮಾಡಿಸಿ ಲುಕ್ಸಾನಿಗೆ ಅವಲ್ ಹರಾಜುದಾರನನ್ನ ಗುರಿಮಾಡುತ್ತೆ.

ನಂಬರು	ಫಾರೆಸ್ಟಿನ ಹೆಸರು	ಹರಾಜು ತಾರೀಖು	ಹರಾಜುಗತಕ್ಕ ಸ್ಥಳ
1	ಕುಂಬ್ಳಗೋಡು	4—5—95	ಬಿಡದಿ
2	ಹುಲ್ತಾರು	ಡಿಟ್ಟೋ	ಡಿಟ್ಟೋ
3	ಹಂದಿಗೊಂದಿ	ಡಿಟ್ಟೋ	ಡಿಟ್ಟೋ
4	ಅಚಲು	ಡಿಟ್ಟೋ	ಡಿಟ್ಟೋ
5	ತೆಂಗಿನಕಲ್	7—5—95	ಚನ್ನಪಟ್ಟಣ
6	ಮಾಕಳ		
7	ಚಿಕ್ಕಮಣ್ಣುಗುಡ್ಡೆ		
8	ದೊಡ್ಡಮಣ್ಣುಗುಡ್ಡೆ		
9	ಕೋಳಿರಾಯನದುರ್ಗ		
10	ಬಾಣಂತಿಮಾರಿ		
11	ಕಬ್ಬಾಳು ಮತ್ತು ಭೀಮನಕರಡಿ	11—5—95	ಕಾರ್ಖಾನಹಳ್ಳಿ
12	ಬಿಳಿಕಲ್		
13	ಚೀಲಂದಾಡಿ ಮತ್ತು ಮೂಗೂರು		
14	ಬಸವನಬೆಟ್ಟ		
15	ರಾಗಿಹಳ್ಳಿ		
16	ಸಾವಂದುರ್ಗ	22—5—95	ಮಾಗಡಿ
17	ಉಜನಿ ಹುಲ್ಕಡಿ ಮತ್ತು ಮಾಕಳಿ	27—5—95	ದೊಡ್ಡಬಳ್ಳಾಪುರ

ಯು. ಶೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಮೋಜಣಿ ಖರ್ಚು ಮೊಬಲಗು 338—7—2.

ಮಾಗಡಿ ತಾಲ್ಲೂಕು ಕಚೇರಿಯಿಂದ.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1ನೇ ಮೋಜಣಿ ಖರ್ಚಿನ ಕಂದಾಯದ ಬಾಕೀದಾರರಾದ ಬವರಿಂಗ್‌ಪೇಟೆ ತಾಲ್ಲೂಕು ತಿಮ್ಮಸಂದ್ರ ಗ್ರಾಮದ ಶಾನುಭೋಗ ವೆಂಗಟರಮಣಯ್ಯನ ಮಕ್ಕಳು ಗುಂಡಪ್ಪನವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟ್ ಮಾಗಡಿ ತಾಲ್ಲೂಕು ತಾವರೆಕೆರೆ ಹೋಬಳಿ ಕಾಯಂಗುತ್ತಾ ಯಲಚಗುಪ್ಪೆ ಗ್ರಾಮದಲ್ಲಿ 1895ನೇ ಮೇ 14ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಈ ಹರಾಜು 22—5—95ನೇ ದಿವ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1894–95ನೇ ಸಾಲಿಗೆ ಪೂರ್ತಿಯಾಗಿ 338—7–2 ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 338—7—2 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ನ್ನ ಡಿಪಾಜಿಟ್ ಹಾಜರ್ ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂತಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು 'ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂತಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸ್ಯೆನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂತಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು. ಹರಾಜು ಮೊಬಲಗು ಛಡಸವಾಲ್‌ದಾರನು ಪೂರಾಕೊಟ್ಟಮಾತ್ರದಿಂದಲೇ ಆಖ್ಯೆರ್ ಸವಾಲನ್ನು ಮಂಜೂರ್ಮಾಡಲು ಗವರ್ನಮೆಂಟನವರು ಬದ್ಧರಾಗಿರುವದಿಲ್ಲ.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಸ್ವತ್ತಿನ ತಪ್ಸೀಲು.										* ಸರಕಾರಕ್ಕೆ ಬರಬೇಕಾದ ನೋಟೀಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.		
				ಕಟ್ಟಡಗಳು.		ಜಮೀನು.										
				ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.						
1	2	3	4	5	6	7	8	9		10				11		
					ರೂ.ಅ.ಪೈ			ಎ.	ಗು.	ರೂ.	ಆ.	ಪೈ.		ರೂ.	ಆ.	ಪೈ.
ಮಾಗಡಿ.	ತಾವರೆಕೆರೆ.	ಕಾಯಂಗುತ್ತಾ ಯಲಚಗುಪ್ಪೆ.	ಬವರಿಂಗಪೇಟೆ ತಾಲ್ಲೂಕು ತಿಮ್ಮಸಂದ್ರದ ಶಾನುಭೋಗರು ವೆಂಕಟರಮಣಯ್ಯನವರ ಮಕ್ಕಳು ಗುಂಡಪ್ಪನವರು	..		ಕಾಯಂಗುತ್ತಾ ಯಲಚಗುಪ್ಪೆ ಗ್ರಾಮ ಪೂರ್ತಾ	ಖುಷ್ಕೀ	301	25	625	8	0		338	7	2
							ತರೀ	30	36							
							ಬಾಗಾಯಿತು	6	28					ಮೋಜಣಿ ಖರ್ಚು ಮೊಬಲಗು		
							ವಟ್ಟು	339	9							
							ಈ ಗ್ರಾಮಕ್ಕೆ ಸಾಲಿಯಾನಾ ಸರ್ಕಾರಕ್ಕೆ ಬರತಕ್ಕದ್ದು.									
							ಏರ್ ಜೋಡಿ	0	0	391	0	0				
							ಚಿಲ್ಲರೆ ಇನಾಂ	0	0	3	6	0				
							ಸೆಸ್ ಜೋಡಿ ಬಗೆ	0	0	24	7	0				
							ಚಿಲ್ಲರೆ ಇನಾಂತಿಗೆ ಸೆಸ್ಸು	0	0	1	12	6				
									ವಟ್ಟು	420	9	6				

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಈ ಹರಾಜನ್ನು 1894—95ನೇ ಇಸವಿ ಕಂದಾಯವನ್ನು ಕೊಡುವ ಷರತ್ತಿನ ಮೇಲೆ ಕೂಗಿಸಲ್ಪಡುತ್ತೆ.

ಯಂ. ನಾಮಕಲ್‌ರಾವ್,
ಘಾರ್ ಡೆಪ್ಯೂಟಿ ಕಮ್ಮಿಷನರ್.